**PW- 01**

**ಇಂದು ದಿಃ 07.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ. ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. 1 ದಿವಸಕ್ಕೆ ರೂ.500/- ಕೂಲಿ ಸಿಗುತ್ತದೆ. 1 ಮತ್ತು 2 ನೇ ಎದುರುದಾರರು ನನಗೆ ಮೊದಲಿನಿಂದ ಪರಿಚಯವಿರಲಿಲ್ಲ. ರಸ್ತೆಯ ಪಕ್ಕದಲ್ಲಿ ನಿಂತಿದ್ದಾಗ ನನಗೆ ಅಪಘಾತವಾಗಿದೆ. ನನಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ಮದ್ಯಪಾನ ಮಾಡಿ ನಾನೇ ಬೈಕ್ ಗೆ ಅಡ್ಡಲಾಗಿ ಹೋದ ಕಾರಣ ಅಪಘಾತವಾಗಿದೆ ಎಂದರೆ ಸುಳ್ಳು. ಅಪಘಾತದಲ್ಲಿ 1 ನೇ ಎದುರುದಾರರಿಗೆ ನನಗಿಂತ ಹೆಚ್ಚಾಗಿ ಪೆಟ್ಟಾಗಿದೆ ಎಂದರೆ ಸುಳ್ಳು. 1 ನೇ ಎದುರುದಾರರು ನಿಧಾನವಾಗಿ ವಾಹನ ಚಾಲನೆ ಮಾಡುತ್ತಿದ್ದರೂ ಸಹ ನಾನೇ ಅಡ್ಡಲಾಗಿ ಬಂದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**